4.	ಸ್ವಯಂ ಉದ್ಯೋಗ	3740	456.10	5785	385.70	155	85
	ಒಟ್ಟು (2)	11763	5274.50	7330	1486.87	62	28
	ಒಟ್ಟು (1+2)	37330	14920.28	20624	5565.25	55	37

(ಎಕರೆಗಳಲ್ಲಿ)

					ಪ.ಜಾತಿ	ಪ.ವರ್ಗ
			ಭೂ ಒಡೆತನ	ಖುಷ್ಕಿ	1826.36	282.05
				ತರಿ	307.21	27.41

ಪರಾ: 1. ಸಫಾಯಿ ಕರ್ಮಚಾರಿ ಪುನರ್ವಸತಿ ಯೋಜನೆಯಡಿ ಗುರಿಯನ್ನು ನಿಗದಿಪಡಿಸಿರುವುದಿಲ್ಲ. ನಗರಾಭಿವೃದ್ಧಿ ಇಲಾಖೆಯು ಗುರುತಿಸಿದ ಸ್ಕ್ಯಾವೆಂಜರ್‌ಗಳಿಗೆ 2006–07ನೇ ಸಾಲಿನ ಬಾಕಿ ಹಣದಿಂದ ಪುನರ್ವಸತಿ ಕಲ್ಪಿಸಲಾಗುತ್ತಿದೆ.

2. ಗಂಗಾ ಕಲ್ಯಾಣ ಯೋಜನೆಯ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯಡಿ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಯಲು ಗುರಿ ಹಮ್ಮಿಕೊಳ್ಳಲಾಗಿದೆ.

3. ಇದಲ್ಲದೆ ಪರಿಶಿಷ್ಟ ಜಾತಿಗೆ ರೂ.1343.42 ಲಕ್ಷ ಅವಧಿ ಸಾಲ ಮತ್ತು ಪರಿಶಿಷ್ಟ ವರ್ಗಕ್ಕೆ ರೂ.114.40 ಲಕ್ಷ ಅವಧಿ ಸಾಲವನ್ನು ರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆದು ಸಾಲ ನೀಡಿದೆ.

ಇ) 2006–07ನೇ ಸಾಲಿನಲ್ಲಿ ನಿಗದಿಪಡಿಸಿರುವ ಗುರಿಯನ್ನು ಮಾರ್ಚ್ 2007ನೇ ಮಾಹೆಯ ಅಂತ್ಯದೊಳಗೆ ಸಾಧಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗುವುದು.

1060 (1052) ಶ್ರೀ ಜೀವಿಜಯ ಬಿ.ಎ. (ಸೋಮವಾರ ಪೇಟೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಕೊಡಗು ಜಿಲ್ಲೆ ಸೋಮವಾರ ಪೇಟೆ ತಾಲ್ಲೂಕಿನ ಸುಂಟಿಕೊಪ್ಪ ಸರ್ಕಾರಿ ಪ್ರಾಥಮಿಕ ಆರೋಗ್ಯ ಘಟಕವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ ಮೇಲ್ದರ್ಜೆಗೇರಿಸಲು ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಸ್ತಾವನೆ ಬಂದಿದೆ.

ಆ) ಸೋಮವಾರ ಪೇಟೆ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 185501 ಇದ್ದು ಮಾರ್ಗಸೂಚಿ ಪ್ರಕಾರ ತಾಲ್ಲೂಕಿನಲ್ಲಿ ಈಗಾಗಲೇ 3 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ (ಸೋಮವಾರ ಪೇಟೆ, ಶನಿವಾರ ಸಂತೆ ಮತ್ತು ಕುಶಾಲನಗರ) ಅದರಲ್ಲೂ ಸೋಮವಾರ ಪೇಟೆ ತಾಲ್ಲೂಕು ಆಸ್ಪತ್ರೆ 125 ಹಾಸಿಗೆಗಳ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿದೆ. ಮಾರ್ಗಸೂಚಿ ಪ್ರಕಾರ ಹೆಚ್ಚಿನ ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶ ಇರುವುದಿಲ್ಲ.

1061 (1292) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಅಜ್ಜಂಪುರ ಮತ್ತು ಬೀರೂರು ಘಾರಂಗಳಲ್ಲಿ ಕಳೆದ 5 ವರ್ಷಗಳಿಂದ ಎಷ್ಟು ಅಮೃತ್‌ಮಹಲ್ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ;

ಆ) ಸ್ವಯಂ ಸೇವಾ ಸಂಘಗಳಿಗೆ ಗೋತಳಿಗಳ ಸಂರಕ್ಷಣೆ ಜವಾಬ್ದಾರಿಯನ್ನು ವಹಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಅಜ್ಜಂಪುರ ಮತ್ತು ಇದಕ್ಕೆ ಸಂಬಂಧಿಸಿದ ಉಪಕೇಂದ್ರಗಳಲ್ಲಿ ಮತ್ತು ಬೀರೂರು ಕ್ಷೇತ್ರಗಳಲ್ಲಿ ಸುಮಾರು 1500 ಅಮೃತ್‌ಮಹಲ್ ತಳಿ ರಾಸುಗಳನ್ನು ಸಾಕಲ್ಪಡುತ್ತಿದ್ದು ಇವುಗಳಲ್ಲಿ ಉತ್ತಮ ಕರುಗಳನ್ನು ಉತ್ಪಾದನೆ ಮಾಡಿ ತಳಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹಾಗೂ ಬೇಸಾಯಕ್ಕೆ ವಿತರಿಸಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ 573 ಅಮೃತ್‌ಮಹಲ್ ಗಂಡು